# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.,

## MC No. 31/2022

**PW** : 1

**ದಿನಾಂಕಃ03.11.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಶ್ರೀ AUS ವಕೀಲರಿಂದಃ**

ಎದುರುದಾರರು ಶಾಲೆಯಲ್ಲಿ ಅಡುಗೆ ಕೆಲಸವನ್ನು ಮಾಡುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಆ ಸಂಬಂಧ ವೇತನ ರಶೀದಿಯನ್ನು ಪಡೆಯಲು ನಾನು ಪ್ರಯತ್ನಿಸಿರುವುದಿಲ್ಲ. ಟೈಲರಿಂಗ್ ಕೆಲಸದಿಂದ ರೂ.20,000/- ಬರುತ್ತದೆ ಎಂದು ಛಾಯಾಚಿತ್ರ ಇದೆ. ಅದನ್ನು ನನ್ನ ಸ್ನೇಹಿತ ತೆಗೆದಿರುತ್ತಾನೆ. ಅರ್ಜಿದಾರರು ಯಾವುದೇ ಕೆಲಸ ಮಾಡುವುದಿಲ್ಲ, ಅವರಿಗೆ ಯಾವುದೇ ಸಂಬಳ ಬರುತ್ತಿಲ್ಲ, ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ3 ರಲ್ಲಿರುವ ವಿಚಾರವನ್ನು ನಾನು ಅರ್ಜಿಯಲ್ಲಿ ಹೇಳಿರುವುದಿಲ್ಲ. ಆಕೆ ಅಂತಹವಳು ಎಂಬ ವಿಚಾರ ನನಗೆ ಮದುವೆಗೆ ಮುಂಚೆ ಕೂಡಾ ಗೊತ್ತಿದ್ದು, ಸಂಧಾನ ಕಾರರು ಸರಿ ಹೋಗುತ್ತಾಳೆ ಎಂದು ಮದುವೆ ಮಾಡಿಸಿರುತ್ತಾರೆ. ಆಕೆಯ ಅಕ್ಕನ ಗಂಡ ಮದುವೆಯನ್ನು ನಿಲ್ಲಿಸಲು ಪ್ರಯತ್ನಿಸಿರುತ್ತಾರೆ. ಅರ್ಜಿದಾರರಿಗೆ ಜೀವನಾಂಶ ಕೊಡುವುದರಿಂದ ತಪ್ಪಿಸಿಕೊಳ್ಳಲು ಆಕೆಯ ಮೇಲೆ ಇಲ್ಲ ಸಲ್ಲದ ಆರೋಪಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರನ್ನು ನನಗೆ ನೋಡಿಕೊಳ್ಳಲಾಗುವುದಿಲ್ಲ ಮತ್ತು ಅವರಿಗೆ ಜೀವನಾಂಶ ಕೊಡಲಾಗುವುದಿಲ್ಲವಾದ್ದರಿಂದ ಸುಳ್ಳಾಗಿ ಆರೋಪಗಳನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

ನನ್ನ ಉಕ್ತಲೇಖನದ ರೀತ್ಯಿತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು